ಯಾವುದೇ ಪಾತ್ರೆಯಾದರೂ ನೀಲಕಮಲ್ ಕಂಪನಿಯದ್ದಿರಬೇಕಿತ್ತು. ಏಕೆಂದರೆ ಅದು ಸ್ವಲ್ಪ ದಪ್ಪವಾದ ಸ್ಟೀಲ್ ಆಗಿದ್ದು, ಅಷ್ಟು ಬೇಗ ನೆಗ್ಗುತ್ತಿರಲಿಲ್ಲ. ಅಂದರೆ ನಾಗಲಕ್ಷ್ಮಿ ಎರಡು ಮೂರು ಸಾರಿ ಎಸೆದ ಮೇಲೆ ವಿರೂಪಗೊಳ್ಳುತ್ತಿತ್ತು. ಕೊಳ್ಳುವಾಗ ಉಳಿದ ಜನರೆಲ್ಲ ಹಾಲು ಹಿಡಿಸ್ತದೇನ್ರೀ ಅನ್ನುವ ಮಾದರಿಯ ಪ್ರಶ್ನೆಗಳನ್ನು ಕೇಳಿದರೆ ಪದುಮಣ್ಣ ಬಿದ್ದರೆ ನೆಗ್ಗತದಾ? ಸೀಳ್ತದಾ? ಎಂಬಂತಹ ಪ್ರಶ್ನೆ ಕೇಳಿ ಅಂಗಡಿಯವರನ್ನು ಗೊಂದಲಕ್ಕೆ ತಳ್ಳುತ್ತಿದ್ದ. 'ರಾಘವೇಂದ್ರ ಪಾತ್ರ ಭಂಡಾರ' ಅಂಗಡಿಯ ವಾಸುದೇವನಂತೂ ಶುಕ್ರವಾರ ಅಂಗಡಿ ತೆಗೆದ ಕೂಡಲೇ ಸಹಾಯಕ ಹುಡುಗನಿಗೆ 'ಇವತ್ತು ಆ ನೀಲಕಮಲ ಗಿರಾಕಿ ಬರೂದಿನ ಅಲ್ಲೇನೋ, ಎರಡು ಕೌಳಗೆ, ನಾಕು ಲೋಟ, ಮೂರು ಸೌಟು ತೆಗೆದಿಟ್ಟು ಬಿಡೋ, ಕಡೆಗೆ ರಶ್ಶು ಇದ್ದಾಗ ಬಂದರೆ ಗಡಿಬಿಡಿ ಆಗೂದು ಬ್ಯಾಡಾ' ಅನ್ನುತ್ತಿದ್ದ. ಪದುಮಣ್ಣನದೇ ಊರಿನ ಕೇಶವನಿಗಂತೂ ಕಾರಣವೂ ಗೊತ್ತಿರುವುದರಿಂದ ಅವನು ಪಾತ್ರೆ ತೋರಿಸುವಾಗಲೇ ಜೋರಾಗಿ ಎಸೆದು 'ನೋಡಿ ಬಿದ್ದರೂ ಏನೂ ಆಗೂದಿಲ್ಲಾ, ಸ್ಟೀಲಿನ ಗೇಜು ಚೊಲೊ ಉಂಟ್ರ, ನಾಕೈದು ಸಲಕ್ಕೆ ತಡ್ತ ಬರ್‍ತದೆ, ನಾ ಗ್ಯಾರಂಟಿ ಕೊಡ್ತೆ' ಎಂದು



ಹೇಳುವಾಗ ಉಳಿದ ಗಿರಾಕಿಗಳು ಅರ್ಥವೇ ಆಗದೇ ಮಿಕಿಮಿಕಿ ನೋಡುತ್ತಿದ್ದರು. ಇದೆಂತ ಮರ್‍ರೆ, ಇವ್ರು ಚೆಂಡು-ಗುಂಡು ತಕಳು ನಮೂನಿ ಮಾತಾಡ್ತಾರೆ, ಪಾತ್ರೆ ಊಟ ಮಾಡೂಕಾ, ಆಟ ಆಡೂಕಾ ಅಂತ ಗೊಂದಲಕ್ಕೆ ಬೀಳುತ್ತಿದ್ದರು.

ಗಂಡನ ಹಾಗೂ ವಲ್ಲರಿಯ ಮೇಲೆ ಸಿಟ್ಟೇರಿ ಕುದಿಯುತ್ತಿದ್ದ ನಾಗಕ್ಕ ಧುಮುಧುಮು ಅಂತ ಪಕ್ಕದ ಬೀದಿಗೆ ಬಂದಳು. ಆ ದಿವಸ ಪಕ್ಕದ ಊರಲ್ಲಿ ಅವಳ ಅಪ್ಪ ಗಪ್ಪತಿಗೆ ಸನ್ಮಾನ ಇಟ್ಟುಕೊಂಡಿದ್ದರು.

ವಯಸ್ಸಾಯಿತು ಅಂತ ಅಂವ ಮ್ಯಾಳ ಬಿಟ್ಟಿದ್ದ. ಹಾಗಾಗಿ ಅವನಿಗೊಂದು ಸನ್ಮಾನ ಮಾಡಿ ಅವನಿಂದ ಕಡೆಯ ಬಾರಿಗೆ ವೀರಭದ್ರನ ವೇಷ ಮಾಡಿಸುವುದು ಅಂತ ನಿಕ್ಕಿ ಆಗಿತ್ತು. ಭರ್ಜರಿ ಪ್ರಚಾರ ನಡೆದು ಹ್ಯಾಂಡಬಿಲ್ಲು ಹಂಚಲಾಗಿತ್ತು. ಅಪ್ಪನ ಕಾರ್ಯಕ್ರಮಕ್ಕೆ ತಾವಿಬ್ಬರು ಹೋಗುವುದೇಯಾ ಅದಕ್ಕಾಗಿ ಬೇಗ ಬರಬೇಕು ಅಂತ ನಾಗಕ್ಕ ವಾರದಿಂದ ಗಂಡನಿಗೆ ತಾಕೀತು ಮಾಡಿದ್ದಳು. ಆಯ್ತು ಬರ್ತೇನೆ, ಹೋಗ್ವಾ, ಅಂದಿದ್ದ ಪದುಮಣ್ಣ ಯಥಾಪ್ರಕಾರ ಮರೆತಿದ್ದ. ವಿಷಯ ವಲ್ಲರಿಗೆ ಗೊತ್ತಿದ್ದರೆ ನೆನಪಿಸುತ್ತಿದ್ದಳೋ ಏನೋ ಆದರೆ ತನ್ನ ಖಾಸಗಿ ವಿಷಯವನ್ನು ಆಕೆಗೆ ಸುತಾರಾಂ ಹೇಳಬಾರದೆಂಬುದು ನಾಗಕ್ಕನ ಆಜ್ಞೆಯಾಗಿತ್ತು. ಇನ್ನೂ ಬರದೇ ಇದ್ದ ಗಂಡನನ್ನು ತರಾಟೆಗೆ ತೆಗೆದುಕೊಳ್ಳಲಿಕ್ಕೆ ಧಾವಿಸಿದ ನಾಗಕ್ಕ ಆಫೀಸು ಇದ್ದ ಕಟ್ಟಡದ ಬುಡಕ್ಕೆ ಬಂದು ನಿಂತಳು. ಅದೊಂದು ಹೆಂಚಿನ ಚಾಳದ ಕಟ್ಟಡ. ಕೆಳಗೆ ಕೆಲವು ಅಂಗಡಿಗಳಿಗೆ ಹಾಗೂ ಮೇಲೆ ಎರಡು ಆಫೀಸುಗಳಿಗೆ ಬಾಡಿಗೆ ಕೊಟ್ಟಿದ್ದರು. ಮೇಲೆ ಹತ್ತಿ ಹೋಗಲಿಕ್ಕೆ ಎಡಬದಿಗೆ ಕಟ್ಟಿಗೆಯ ಏಣಿ ಮೆಟ್ಟಿಲು. ಹಿಡಿದುಕೊಳ್ಳಲಿಕ್ಕೆ ಮೇಲಿಂದ ಜೋತು ಬಿದ್ದ ಬಾವಿಹಗ್ಗ. ನಾಗಕ್ಕ ದಪದಪ ಮೆಟ್ಟಿಲು ಹತ್ತುವಾಗ ವಲ್ಲರಿಯ ಜೋರು ಜೋರು ಧ್ವನಿ ಕಿವಿಗೆ ಬೀಳುತ್ತಿತ್ತು. ಏನೋ ಮಾತಿಗೆ ಎಲ್ಲರೂ ಜೋರಾಗಿ ನಗತೊಡಗಿದ್ದರು. ಅಟ್ಟಹಾಸ ಮಾಡ್ತಾಳೆ ಈ ಕೊಮ್ಮಣಗಿತ್ತಿ ಇವಳ ಕುತ್ತಿಗೆ ಅಡಚಿ ಹಾಕ್ತೆ ಎಂದು ಕರಕರ ಹಲ್ಲು ಮಸೆಯುತ್ತ ಹತ್ತಿ ಮುಗಿದ ನಂತರದ ಪ್ಯಾಸೇಜಿಗೆ ಕಾಲಿಟ್ಟಳು. ಪಾದದ ಬುಡಕ್ಕೆ ವಲ್ಲರಿಯ ಚಪ್ಪಲಿ ಎಡವಿತು. ಉಕ್ಕಿ ಬಂದ ರೋಷಕ್ಕೆ